# 3I SOLUTIONS

**PUBLIC & TRACK MAINTAINERS SAFETY AWARENESS-2024**

## ಭಾರತೀಯ ರೈಲು ಇಲಾಖೆಯ ನೌಕರರಿಗೆ 2024ರ ಹೊಸ ವರ್ಷದ ಹಾರ್ದಿಕ ಶುಭಾಶಯಗಳು

**2024**

## ರೈಲು ಹಾಡುಗಳು

ರೈಲು ಪದ್ಯಗಳ ಹುಡುಕಾಟ ಎಲ್ಲಾ ಗ್ರಂಥಾಲಯ ಪುಸ್ತಕಗಳ ಅಂಗಡಿಯಲ್ಲಿ ಹುಡುಕಿದೆ, ಕೆಲವರು ನಕ್ಕರು, ಕೆಲವರು ಆ ತರಹದ ಸಂಗ್ರಹದ ಬರಹವಿಲ್ಲವೆಂದರು. ಎಲ್ಲಾ ಕವಿಗಳ ರೈಲು ಹಾಡುಗಳ ಸಂಗ್ರಹ ಮಾಡಿ ಒಂದು ಪುಸ್ತಕ ಮಾಡೋಣವೆಂದು ಪ್ರಯತ್ನ ಪಟ್ಟೆ, ಎಲ್ಲೋ ಒಂದೋ-ಎರಡೋ ಪದ್ಯಗಳು ದೊರೆತವು. ನನ್ನಲ್ಲಿದ್ದ ಉತ್ಸಾಹ ಹಾಗೂ ನನಗಾಗಿರುವ ಈ 40 ವರ್ಷಗಳ ಅನುಭವವನ್ನೇ ಯಾಕೆ ರೈಲು ಹಾಡಾಗಿ ಬರೆಯಬಾರದೆಂದೆನಿಸಿತು. ಈ ಇಲಾಖೆಯ ಬೆನ್ನಲುಬಾಗಿ ದುಡಿಯುವ ವರ್ಗಕ್ಕೆ ಒಂದು ಒಳ್ಳೆಯ ಗೌರವ ಸಿಗುವ ನಿಟ್ಟಿನಲ್ಲಿ ರೈಲು ಹಾಡುಗಳನ್ನು ಬರೆದಿರುತ್ತೇನೆ. ಇದು ಎಲ್ಲಾ ಭಾರತೀಯ ರೈಲು ನೌಕರರಿಗೆ ಅರ್ಪಣೆ. ಮೊದಲನೇ ಹಾಡಿನ ಈ ವರ್ಷದ ಕ್ಯಾಲೆಂಡರ್ ಆಗಿ ಇಲ್ಲಿ ನಾನು ಟ್ರಾಕ್‌ಮ್ಯಾನ್‌ಗಳಿಗಾಗಿಯೇ ಹೆಚ್ಚು ಪದ್ಯಗಳನ್ನು ಬರೆದಿದ್ದೇನೆ. ಕಾರಣ, ಅವರ ದುಡಿಮೆಗೆ ತಕ್ಕ ಪ್ರತಿಫಲ ಮತ್ತು ಗೌರವ ಸಿಗುತ್ತಿಲ್ಲವೆನ್ನುವ ಕಾರಣದಿಂದ. ಮುಂದೊಂದು ದಿನ ಅವರಿಗೆ ಈ ರೈಲ್ವೇ ಇಲಾಖೆಯಿಂದ ಗೌರವ ಸಿಗಲಿ, ಅವರನ್ನು ಗೌರವದಿಂದ ನೋಡುವ ರೀತಿ ಬದಲಾಗಲಿ ಹಾಗೂ ಆ ಸುಸಮಯ ಬರಲಿ.

ಒಂದಾನೊಂದು ಕಾಲದಲ್ಲಿ ಇದ್ದ ಅನಕ್ಷರಸ್ತ ಗ್ಯಾಂಗ್‌ಮ್ಯಾನ್‌ಗಳು ಈಗ ಈ ಇಲಾಖೆಯಲ್ಲಿ ಇಲ್ಲ. ಈಗ ಶೇಕಡ 90 ರಷ್ಟು ಟ್ರಾಕ್‌ಮ್ಯಾನ್ ನೌಕರರು ಎಸ್‌ಎಸ್‌ಎಲ್‌ಸಿ ಹಾಗೂ ಪದವೀಧರರಾಗಿದ್ದರೆ, ಹೆಚ್ಚಿನವರು ಟೀಚರ್ ಸಹ ಇದ್ದಾರೆ. ಇವರಿಗೆಲ್ಲ ಹೆಚ್ಚಿನ ಉತ್ಸಾಹ ತುಂಬುವ ಸಲುವಾಗಿ ಈ ಪದ್ಯಗಳನ್ನು ಬರೆದಿದ್ದೇನೆ. ಯಾರು ಅನ್ಯತ ಭಾವಿಸಬೇಡಿ, ಇಲ್ಲಿ ರೈಲು ಇಲಾಖೆಯ ಸಿಬ್ಬಂದಿಗಳು ನನ್ನ ಮೇಲೆ ಇಟ್ಟ ಪ್ರೀತಿಯನ್ನು ವ್ಯಕ್ತಪಡಿಸಿದ್ದೇನೆ ಹಾಗೂ ಹೆಚ್ಚಿನ ಟ್ರಾಕ್‌ಮ್ಯಾನ್‌ಗಳು ನನ್ನ ಮೇಲೆ ಇಟ್ಟ ಪ್ರೀತಿಗೆ ನಾನು ಚಿರಋಣಿಯಾಗಿದ್ದೇನೆ.

ಇದು ರೈಲ್ವೇ ನೌಕರರನ್ನು ಉತ್ತೇಜಿಸುವ, ತಮ್ಮ ಕರ್ತವ್ಯದಲ್ಲಿ ಆಸಕ್ತಿ ತೋರಿ ಸುಖಕರ ಪ್ರಯಾಣಕ್ಕೆ ಮತ್ತು ಶುಚಿತ್ವಕ್ಕೆ ಕೈ ಜೋಡಿಸುವ ಒಂದು ಹೊಸ ತಯಾರಿ ಅಥವಾ ಪ್ರಯೋಗವೆಂದರೆ ತಪ್ಪಾಗಲಾರದು. ದಿನದ 24 ಗಂಟೆ ದುಡಿಯುವ ಈ ನೌಕರರು ಮಾಡುವ ಸೇವೆಯನ್ನು ಹಾಡಿನಲ್ಲಿ ಬರೆದು ಜನಗಳ ಹಾಗೂ ಪ್ರಯಾಣಿಕರ ಗಮನಕ್ಕೆ ತಂದು, ಅವರುಗಳು ಸಹ ರೈಲ್ವೆ ಇಲಾಖೆಯ ಬೋಗಿಗಳನ್ನು, ಫ್ಲಾಟ್‌ಫಾರಂಗಳನ್ನು ಶೌಚಾಲಯಗಳನ್ನು ಉಪಯೋಗಿಸಿದ ನಂತರ ಶುಚಿಯಾಗಿ ಇರಿಸಿದರೆ ಅದು ಒಂದು ಕೊಡುಗೆಯಲ್ಲವೆ. ನಾವುಗಳು ಎಷ್ಟೇ ಶುಚಿಯಾಗಿಟ್ಟರು, ಶುಚಿಯಾಗಿಡಲು ಪ್ರಯಾಣಿಕರ ಜವಾಬ್ದಾರಿ ಮತ್ತು ಸಹಕಾರ ಎರಡೂ ಇರಬೇಕು. ಆಗಲೇ ನಾನು, ನಮ್ಮದು ಎಂಬ ಮನೋಭಾವ ಬರುತ್ತದೆ, ಬರಿ ನಮ್ಮಗಳ ಮನೆ ಶುಚಿಯಾದರೆ ಪ್ರಯೋಜನವಿಲ್ಲಾ, ನಮ್ಮ ಮನ ಮತ್ತು ಪರಿಸರ ಶುಚಿಯಾದಾಗ ವಾತಾವರಣವು ಶುಚಿಯಾಗಿರುತ್ತದೆ.

ಬನ್ನಿ ನಮ್ಮ ಈ ಪ್ರಯೋಗಕ್ಕೆ ನೀವೂ ನಿಮ್ಮ ಕೈ ಜೋಡಿಸಿ, ಇದಕ್ಕೆ ನಿಮ್ಮಯ ಸಹಕಾರ ಮತ್ತು ಸಹಮತವಿದೆಯೆಂದು ನಂಬಿರುತ್ತೇನೆ. ಮತ್ತೊಮ್ಮೆ **2024**ರ ಹಾರ್ದಿಕ ಶುಭಾಷಯಗಳನ್ನು ಹೇಳುತ್ತ ಎಲ್ಲರಿಗೂ ಆ ದೇವರು ಒಳ್ಳೆಯದು ಮಾಡಲೆಂದು ಪ್ರಾರ್ಥಿಸುತ್ತಾ ಇದನ್ನು ಭಾರತೀಯ ರೈಲು ನೌಕರುಗಳಿಗೆ ಸಮರ್ಪಿಸುತ್ತಿದ್ದೇನೆ.

**ವಂದನೆಗಳೊಂದಿಗೆ,**

- **ಶ್ರೀವತ್ಸ ಹಂಪಾಪುರ**
ನಿವೃತ್ತ ಪ್ರಾಂಶುಪಾಲರು
ರೈಲು ಹಳಿ ತರಬೇತಿ ಕೇಂದ್ರ
ಬೆಂಗಳೂರು.

*Please join your hands with us for a smooth, Safety and comfortable journey .*

Copyright:3i Solutions-Mysuru, Karnataka, India, Ph:- 9242875447, email:3iSolution59@gmail.com

DEVELOPERS OF INNOVATIVE TEACHING & TRAINING AID SAFETY MATERIALS

# 3I SOLUTIONS

## PUBLIC & TRACK MAINTAINERS SAFETY AWARENESS-2024

ಜನವರಿ
2024

# ರೈಲು ಹಳಿಯ ಸಿಪಾಯಿಗಳು

ನಾವು ಭಾರತೀಯ ರೈಲ್ವೆ ಇಲಾಖೆಯ ಹಳಿಯ ಸಿಪಾಯಿಗಳು
ನಮ್ಮನು ಕರೆವರು ರೈಲು ಇಲಾಖೆಯ ಬೆನ್ನೆಲುಬೆಂದು, ಬೆನ್ನೆಲುಬೆಂದು.

ಎರಡು ಕಂಬಿಗಳ ಮೇಲೆ ರೈಲು ಬಂಡಿ ಓಡುವುದಣ್ಣ
ಚುಕು ಬುಕು ಚುಕು ಬುಕು ಸದ್ದನು ತಾ ಮಾಡುವುದಣ್ಣ
ಕಾಲ ಕಾಲಕು ರೈಲು ಪ್ರಯಾಣವೇ ಸುಖಕರವಣ್ಣ
ಹಗಲಿರುಳೆನ್ನದೆ ದುಡಿವೆವಣ್ಣ, ನಿಮ್ಮಯ ರಕ್ಷಣೆ ನಮದಣ್ಣ
ನಮ್ಮಯ ರಕ್ಷಣೆಗೆ ನೀವೆಲ್ಲಣ್ಣ.............?

ಮಳೆ ಬರುವಾಗ ಲಾಂದ್ರವ ಹಿಡಿದು
ಹಳಿಯನ್ನು ನೋಡುತ, ಶಿಳ್ಳೆಯನೂದಿ
ಫಲಕವ ತೋರಿ, ಕತ್ತಲೆಯಲಿ ನಡೆವೆವರಣ್ಣ,

ಡ್ರೈವರ್‌ಣ್ಣನಿಗೆ ಎಚ್ಚರಿಸುವೆವು ನಾವಣ್ಣ,
ನಿಮ್ಮಯ ರಕ್ಷಣೆ ನಮದಣ್ಣ
ನಮ್ಮಯ ರಕ್ಷಣೆಗೆ ನೀವೆಲ್ಲಣ್ಣ,.............?

ರಾತ್ರಿಯಲೊಬ್ಬನೆ ಕಾಡನು ಸುತ್ತಿ,
ಸುರಂಗದಿ ನಡೆದು, ಸೇತುವೆ ದಾಟಿ,
ನಿಮ್ಮಯ ರಕ್ಷಣೆಗೆ ಕಾಯುವೆವಣ್ಣ
ನಮ್ಮಯ ರಕ್ಷಣೆಗೆ ನೀವೆಲ್ಲಣ್ಣ?................

ಚಳಿಗಾಲದಲ್ಲಿ ರೈಲು ಹಳಿಯ ಬಿರುಕನು ನೋಡಲು
ಪಹರೆಯ ಹೊರಡುವೆವು ನಾವಣ್ಣ.
ಸುಡುಬೇಸಿಗೆಯಲಿ ಕಾದ ಕಂಬಿಯ ಕಾಟವ ತಪ್ಪಲು
ಹೊರಡುವೆವು ಪಹರೆಗೆ ನಾವಣ್ಣ,
ನಮ್ಮಯ ರಕ್ಷಣೆಗೆ ನೀವೆಲ್ಲಣ್ಣ?...............

ದಿನವು ಗಡಿಯಾರದ ಹಾಗೆ ದುಡಿವೆವು ಅಣ್ಣ
ನಿಮ್ಮಯ ಸುಖಕರ ಪ್ರಯಾಣಕ್ಕೆ
ಹಳಿ ತೊಂದರೆಗೀಡಾದಾಗ ರಕ್ಷಣೆ ಮಾಡಿ
ಬಂಡಿಯ ಸುರಕ್ಷತೆಯಿಂದ ಕಳಿಸುವೆವಣ್ಣ
ಈಗ ನೀವೇ ಹೇಳಿ ನಮ್ಮಯ ರಕ್ಷಣೆಗೆ ನೀವೆಲ್ಲಣ್ಣ
ನಮ್ಮಯ ಕಷ್ಟ ನಿಮಗೆ ಹೇಗೆ ತಿಳಿಯುತ್ತಣ್ಣ ?

ನಾವು ಭಾರತೀಯ ರೈಲ್ವೆ ಇಲಾಖೆಯ ಹಳಿಯ ಸಿಪಾಯಿಗಳು
ನಮ್ಮನು ಕರೆವರು ರೈಲು ಇಲಾಖೆಯ
ಬೆನ್ನೆಲುಬೆಂದು, ಬೆನ್ನೆಲುಬೆಂದು.

- **ಶ್ರೀವತ್ಸ ಹಂಪಾಪುರ**



**JANUARY** 2024

ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.



Ashwini Vaishnaw
Hon. Rly Minister

| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 | 28 | 29 | 30 | 31 | | | | | | | | | | |



H. K. Srivatsa
Writer

*Please join your hands with us for a smooth, Safety and comfortable journey .*

Copyright:3i Solutions-Mysuru, Karnataka, India, Ph:- 9242875447, email:3iSolution59@gmail.com

DEVELOPERS OF INNOVATIVE TEACHING & TRAINING AID SAFETY MATERIALS

3I SOLUTIONS
PUBLIC & TRACK MAINTAINERS SAFETY AWARENESS-2024

ಫೆಬ್ರುವರಿ
2024

# ಕೀಮ್ಯಾನ್

ಸೂರ್ಯನ ಉದಯಕೆ ಮೊಗವನು ತೋರಿ
ಸುತ್ತಿಗೆ, ಸ್ಪಾನರ್ ಕೈಯಲಿ ಹಿಡಿದು ಹಳಿಯಲಿ
ಪಹರೆಗೆ ಹೊರಡುವೆನು.

ಹಳಿಯಲ್ಲಿನ ಡೊಂಕನು, ಬಿರುಕನು, ತಗ್ಗನು,
ಗಮನಿಸಿ ದಿನವೂ ಹನ್ನೆರಡು ಕಿ.ಮೀ ಸುತ್ತುವೆನು.


ಬೆಟ್ಟ-ಗುಡ್ಡ, ಕಟಿಂಗ್ ಕಾಲುವೆ,
ಬಂಡೆ, ಸೇತುವೆ, ಸುರಂಗ, ತಿರುವು,
ಮರಗಳ ವೀಕ್ಷಿಸಿ ನಡೆಯುವೆನು.
ಹರಕಲು ಚೀಲವ ಬೆನ್ನಲ್ಲಿ ಹೊತ್ತು
ಹಳಿಯಲಿ ಸಾಗುತ ಜೀವನ ಸವೆಸುವೆನು.


ನನ್ನನೇ ನಂಬಿಹ ರೈಲು ಚಾಲಕ ಧೈರ್ಯದಿ ಬಂಡಿಯ ಓಡಿಪನು,
ಹಳಿಯೇ ಮನೆಯು, ಹಳಿಯೇ ಗುಡಿಯು
ಹಳಿ ಇಲ್ಲದೆ ನಾನಿಲ್ಲ, ನಾನಿಲ್ಲದೆ ಹಳಿಯಿಲ್ಲ.


ನನ್ನೀ ನಂಬಿಹ ರೈಲು ಇಲಾಖೆಗೆ ನನ್ನ ಸೇವೆಯ ಬೆಲೆಯಿಲ್ಲ,
ನನ್ನೀ ನೋವ ಯಾರಲಿ ಹೇಳಲಿ, ಎಲ್ಲರ ಕಿವಿ ಕಿವುಡಾಗಿಹುದು.
ದಿನವೂ ಮುಗಿಯದ ನನ್ನೀ ಕೆಲಸವ ಮಾಡಲು ಒಪ್ಪರು
ನನ್ನೀ ಇಲಾಖೆಯ ಬೇರೊಬ್ಬರು.

ನನ್ನನು ನಂಬಿಹ ರೈಲು ಪ್ರಯಾಣಿಕರ
ಜೀವಕೆ ನಾ ಗ್ಯಾರಂಟಿ, ನನ್ನೀ ಜೀವಕೆ
ಆ ದೇವನು ಸಹ ಕೊಡಲೊಪ್ಪನು ನೋ ಗ್ಯಾರಂಟಿ
ಹಳಿ ಇಲ್ಲದೆ ನಾನಿಲ್ಲ, ನಾನಿಲ್ಲದೆ ಹಳಿಯಿಲ್ಲ.

**- ಶ್ರೀವತ್ಸ ಹಂಪಾಪುರ**










## FEBRAURY 2024

ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.

| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 | 25 | 26 | 27 | 28 | 29 | | | | | | | | | |



Kengal Hanumanthaiah
Ex. Rly Minister



H. K. Srivatsa
Writer

*Please join your hands with us for a smooth, Safety and comfortable journey .*

Copyright:3i Solutions-Mysuru, Karnataka, India, Ph:- 9242875447, email:3iSolution59@gmail.com

DEVELOPERS OF INNOVATIVE TEACHING & TRAINING AID SAFETY MATERIALS

# 3I SOLUTIONS


## PUBLIC & TRACK MAINTAINERS SAFETY AWARENESS-2024

ಮಾರ್ಚ್
2024

# ಗೇಟ್ ಮ್ಯಾನ್


ಎಂದಿಗೂ ಬೇಡ, ಯಾರಿಗೂ ಬೇಡ, ಈ ಗೇಟಿನ ಕಾಯಕವು,
ನಿಷ್ಠೆಯಿಂದ ದುಡಿದರು ಸಿಗದು ಗೌರವವು
ತಿನ್ನುವ ಅನ್ನಕ್ಕೆ ನೆಮ್ಮದಿ ಇರದು, ಮಾಡುವ ಸೇವೆಗೆ
ಮಾನ್ಯತೆ ಸಿಗದು, ಯಾರಿಗೂ ಬೇಡ ಈ ಕಾಯಕವು.

ಬೈಯುವರೆಲ್ಲರು ಮಾಡುವ ಕೆಲಸಕೆ ದಿನವು ಜಗಳಗಳು,
ರಸ್ತೆಯ ವಾಹನ ತಡೆಯದೆ ರೈಲು ಬಂಡಿಯ ಕಳಿಸೆನ್ನುವರು.
ನಾ ಮಾಡುವ ಕೆಲಸ, ಜನ ರಕ್ಷಣೆಗೆ
ಅದನ್ನರಿಯದ ಜನರು ನನ್ನದೇ ತಪ್ಪೆನ್ನುವರು.



ದಿನವು ಹನ್ನೆರಡು ಗಂಟೆ ದುಡಿಯುವ ನಾವು,
ನಮ್ಮೀ ಜನಗಳ ಸುಖಕರ ಪ್ರಯಾಣಕ್ಕೆ, ರೈಲು-ರಸ್ತೆಗೆ
ಗೇಟನ್ನು ಮುಚ್ಚಿ, ರೈಲು ಬಂಡಿಯ ಕಳುಹಿಸುವ ತನಕ
ನಿಲ್ಲುವಲೊಲ್ಲರು ಯಾರೊಬ್ಬರು.

ಒಂದೇ ನಿಮಿಷದಿ ಶರವೇಗದಿ ಬರುವ ಬಂಡಿಯ ನೋಡಿ
ಗೇಟನು ಹಾಕು ಎನ್ನುವರು, ನಮ್ಮನು ತಡೆಯಲು ನಿನ್ಯಾರೆನ್ನುವರು,
ಬೈಯುವರೆಷ್ಟೊ, ಹೊಡೆಯುವರೆಷ್ಟೊ, ಈ ದೈನಂದಿನ
ಕೆಲಸದಲಿ, ಮಾಡುವ ಕೆಲಸಕೆ ಮನ್ನಣೆ ಸಿಗದು
ಅಂದು ಇಂದು ಎಂದೆದೂ.



ಕೊಡಲೊಲ್ಲನು ಮಾಸ್ತರ್, ಗೇಟನು ಮುಚ್ಚಲು ತೆರೆಯಲು
ಪಿ.ಎನ್. ನನ್ನು, ನಾ ಫೋನ್ ಮಾಡಿದರೆ ಬ್ಯುಸಿ ಎನ್ನುವನು
ನಾ ಕರೆದಾಗ ನೀ ಉತ್ತರಿಸು ಎನ್ನುವನು,
ಯಾರಿಗೆ ಹೇಳಲಿ ನನ್ನಯ ನೋವಾ
ನನ್ನಿ ಯಾತನೆಗೆ ಎಲ್ಲರೂ ನಿಂದೆ ತಪ್ಪೆನ್ನುವರು.

ಕೆಂಪು ಬ್ಯಾನರ್ ಬಾವುಟ ನೋಡದ ರೈಲು ಚಾಲಕ, ಬಾವುಟವನ್ನೇ
ಹೊಡೆದೋಡುವನು, ಅವಮಾಡಿದ ತಪ್ಪಿಗೆ ನನಗೆ ಶಿಕ್ಷೆ
ನಾ ಮಾಡದ ತಪ್ಪಿಗೆ ನನಗಿಲ್ಲ ರಕ್ಷೆ.

ರಾತ್ರಿಯೊಬ್ಬನೆ ಕತ್ತಲಲ್ಲಿರುವೆ, ಮಂಪರು ಬಂದರೆ
ತೂಕಡಿಸದಿರುವೆ, ಚಳಿ, ಮಳೆಯೆಂದು ಬಾಗಿಲ ಮುಚ್ಚದೆ,
ಕಣ್ಣನು ಮುಚ್ಚದೆ ಎಚ್ಚರದಿಂದಿರುವೆ, ಎಂದೊ ಬರುವ
ಅಧಿಕಾರಿ ನಿದ್ರಿಸುತ್ತಿರುವ ನಿನಗೆ, ನೀಡುವೆ ಚಾರ್ಜ್‌ಶೀಟ್ ಎನ್ನುವನು.

ಕೊಡುವನು ಮಾಸ್ತರ್, ಗೇಟನು ಮುಚ್ಚಲು - ತೆರೆಯಲು ಒಂದೇ ಪಿ.ಎನ್. ಎನ್ನುವನು
ನನ್ನನ್ನು ನಂಬದ ನನ್ನಯ ಅಧಿಕಾರಿ, ಮಾಸ್ತರ್ ಮಾತಿಗೆ ತಲೆದೂಗುವನು
ನಾನೆ ಕೆಟ್ಟವನಂತೆ ನೋಡುವನು.

ಎಂದಿಗೆ ಬರುವುದು ಆ ದೇವಗೆ ಕರುಣೆಯು
ಎಂದಿಗೆ ತಿಳಿವುದು ಜನರಿಗೆ ನಮ್ಮಯ ಸೇವೆಯು
ಎಂದಿಗೆ ಅರಿವುದು ನಮ್ಮಯ ಕಷ್ಟವು ನಮ್ಮಯ ಇಲಾಖೆಗೆ

ಅಂದೇ ಸಿಗುವುದು ಬಾಳಲಿ ನೆಮ್ಮದಿಯು.
ಅಂದಿನ ತನಕ ಈ ಗೋಳಲಿ ಜೀವನ ಕಳೆಯುವೆವು.

- **ಶ್ರೀವತ್ಸ ಹಂಪಾಪುರ**

## MARCH 2024

ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.



C.K. Jaffar Sharief
Ex. Rly Minister

| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | 31 | | | | | | |



H. K. Srivatsa
Writer

*Please join your hands with us for a smooth, Safety and comfortable journey .*

Copyright:3i Solutions-Mysuru, Karnataka, India, Ph:- 9242875447, email:3iSolution59@gmail.com


DEVELOPERS OF INNOVATIVE TEACHING & TRAINING AID SAFETY MATERIALS

# 3I SOLUTIONS

**PUBLIC & TRACK MAINTAINERS SAFETY AWARENESS-2024**

ಏಪ್ರಿಲ್ 2024


## ಮೇಸ್ತ್ರಿ ಅಣ್ಣ




ಅಪ್ಪ-ಅಮ್ಮನಿಗೆ ಹೆದರದ ನಾವು ಈ ಮೇಸ್ತ್ರಿ ಅಣ್ಣನಿಗೆ ಬೆದರುವೆವು,
ಶಾಲಾ-ಕಾಲೇಜಿನ ಮಾಸ್ಟರನ ಬೆದರಿಸಿದ ನಾವು, ಈ ಮೇಸ್ತ್ರಿಯ ಕೂಗಿಗೆ ನಡುಗುವೆವು.

ಕೈಯಲ್ಲಿ ಇರದು ಬೆತ್ತವು, ಆದರೆ ಹೆದರುವೆವು ಮಾನಕ್ಕೆ ನಾವು,
ಇದಾ ತಿಳಿದ ಅವನು, ಬುಗುರಿಹಾಗೆ ಹಿಂದಕೆ-ಮುಂದಕೆ ನಮ್ಮನು ತಿರುಗಿಸುವನು.
ತಿಳಿಯಿತು ಅವನಿಗೆ ನಾವು ನಿರುದ್ಯೋಗಿ-ಪದವೀಧರರೆಂದು,
ಬಂದಿಹರಿವರು ಈ ರೈಲು ಕೆಲಸವೇ ನಂಬಿಕೊಂಡು,
ಬಿಡರಿವರು ಈ ಉದ್ಯೋಗವನು, ಸಿಕ್ಕಿತು ಮೀನು ನನ್ನಯ ಗಾಳಕ್ಕೆಂದು, ಎಂದೆಂದೂ.

ಕೆಲಸದಲಿ ಹೆಣ್ಣು-ಗಂಡು ನನಗೆ ಎರಡು ಒಂದೇ ಎನ್ನುವನು,
ತೆಗೆದುಕೊಳ್ಳುವುದಿಲ್ಲವಾ ತಿಂಗಳ ಸಂಬಳವೆಂದು ಜರಿಯುವನು.
ಸಿಗದು ನಿನ್ನಯ ಸಂಬಳ ಸಾಫ್ಟ್‌ವೇರ್ ಇಂಜಿನಿಯರ್‌ಗಳಿಗೂ, ಎಂದು ಹಂಗಿಸುವನು,
ಹೊರಡಿ ಈಗಲೇ ಪೆಟ್ಟಿಗೆ ಬಳಿಗೆ ಹಾಜರ್ ಕೊಡಲು ಮುಂದಾಗಿ ಎನ್ನುವನು.



ಕಟ್ಟಿರಿ ನಿಮ್ಮಯ ಬುತ್ತಿಯನು,
ಮುಗಿಸಿರಿ ತಿಂಡಿ ಹತ್ತೆ ನಿಮಿಷದಲಿ ಎನ್ನುವನು
ಎಳೆಯಿರಿ ಜಲ್ಲಿಯ ಶರವೇಗದಲಿ,
ಹೊಡೆಯಿರಿ ಪ್ಯಾಕಿಂಗ್ ಎನ್ನುವನು
ಹಳಿಯಲ್ಲಾಗುವ ಉಬ್ಬು, ತಗ್ಗು, ಡೊಂಕುಗಳ
ಸರಿಪಡಿಸಿದರು ಬಿಡನು ನಮ್ಮನು ಊಟಕೆ.

ತೆಗೆಯಿರಿ ನಿಮ್ಮಯ ಕಣ್ಣಿಗೆ ಕಟ್ಟಿರುವ ಬಟ್ಟೆಯನು
ತಿಳಿಸಿರಿ ಜನಗಳಿಗೆ ನಿಮ್ಮಯ ಕೆಲಸವೇ ಹೆಚ್ಚೆಂದು,
"ನೆನೆಯಿರಿ ಕೈ ಕೆಸರಾಗದೆ ಬಾಯ್ ಮೊಸರಾಗದು ಎಂದು"
ತೋರಿದ ಮಹಾತ್ಮರ ದಾರಿಯನು
ಅವರಂತೇ ನೀವು ಸಹ ಈ ಭಾರತೀಯ ರೈಲು ಇಲಾಖೆಗೆ,
ನಿಷ್ಠೆಯಿಂದ ಮಾಡಿರಿ ದೇಶ ಸೇವೆಯನೆನ್ನುವನು.

ಮಾಡಿರಿ ರೈಲು ಇಲಾಖೆ ಬಂಗಾರವನು
ಆಗಲೇ ನಿಮ್ಮ ಬಾಳಲಿ ಬೆಳಕಾಗುವುದೆನ್ನುವನು.

- **ಶ್ರೀವತ್ಸ ಹಂಪಾಪುರ**



**APRIL** ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ. **2024**

| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 | 28 | 29 | 30 | | | | | | | | | | | |



Mallikarjuna Kharge
Ex. Rly Minister



H. K. Srivatsa
Writer

*Please join your hands with us for a smooth, Safety and comfortable journey .*



Copyright:3i Solutions-Mysuru, Karnataka, India, Ph:- 9242875447, email:3iSolution59@gmail.com


DEVELOPERS OF INNOVATIVE TEACHING & TRAINING AID SAFETY MATERIALS

## ಸೆಕ್ಷನ್ ಇಂಜಿನಿಯರ್ (ಪಿ.ವೆ)

ಏಕೆ ಹೀಗಾಡುವನು ತಿಳಿಯುವುದಿಲ್ಲ ನಮ್ಮಗಳಿಗೆ,
ಕುಂತರು-ನಿಂತರು, ಚಡಪಡಿಸುವವನು, ಕಾಣದು ತಾಳ್ಮೆಯು ಮೊಗದಲ್ಲಿ.

ದಿನವೂ ಬ್ಯುಸಿ, ಬ್ಯುಸಿ ಎನ್ನುವನು
ಮೊಬೈಲ್ ಕೈಯಲ್ಲಿ ಹಿಡಿದು ಓಡುವನು, ನೆಗೆದಾಡುವನು
ಟ್ರಾಲಿ ಸೀಟನು ಪಕ್ಕಸರಿಸಿ, ಪಟ-ಪಟ ಪಟಾಕಿಯಂತಾಡುವನು.



ಆಗದ ಕೆಲಸವ ಇಂದೇ ಆಗಿಯೇ ತೀರಬೇಕೆನ್ನುವನು
ಸಮಯವ ನೋಡದೆ ಮಾಡಿರಿ ಕೆಲಸ ಎನ್ನುವನು, ಸುಮ್ಮನೆ ರೇಗಾಡುವನು.

ರಜೆ-ಗಿಜೆ ಇಲ್ಲ, ಹಬ್ಬಗಳಿಲ್ಲ, ಸ್ನೇಹಿತರಿಲ್ಲ, ಬಂಧು-ಬಳಗವಿಲ್ಲ
ಹೆಂಡರು-ಮಕ್ಕಳು, ಇದ್ದರೂ ಕೆಲಸವೇ ಎಲ್ಲಾ ನನಗೆನ್ನುವನು.


ತಂದು ಕೊಂಡನು ನಲವತ್ತಕ್ಕೆ ಸಕ್ಕರೆ, ಬೀಪಿ, ಕಾಯಿಲೆಯನು
ಸದಾ ಕೊತ-ಕೊತ ಕುದಿಯುವನು, ಹೇಳುವ ಮಾತನು ಕೇಳಿಸಿಕೊಳ್ಳದೆ
ಹಳಿಯಿಂದಲೇ ಹಾರುವನು, ಜಿಗಿದಾಡುವನು, ನೆಗೆದಾಡುವನು.

ಎಲ್ಲಾ ಕೆಲಸವ ಮಾಡಲು ಹೋಗಿ, ಒಬ್ಬನೇ ಪರದಾಡುವನು, ಒದರಾಡುವನು
ಹಳಿಯ ನಿರ್ವಹಣೆ ಮಾಡಲು ಹೋಗಿ, ನೆಮ್ಮದಿ ಇಲ್ಲದೆ ಸಾಯುವನು.
ಸಾಗದು ಬಂಡಿಯು ನಮ್ಮಯ ಸಹಮತವಿಲ್ಲದೇ,
ಅದನ್ನರಿಯದೆ ಕೊತ-ಕೊತ ಕುದಿಯುವನು

ನಾವುಗಳೆಲ್ಲ ಕೆಲಸವ ಮಾಡಿ, ಉಂಡು ಮಲಗಿದರೂ,
ರಾತ್ರಿಯಲೆಲ್ಲ ಪರದಾಡುವನು, ಕಾರಣ ಹೇಳದೆ ಒದ್ದಾಡುವನು.

ವೇಗದಿ ಬಂಡಿ ಓಡಿದರೆ ಆಗುವುದವನಿಗೆ ಮೈ ನಡುಕಾ,
ದಿನೇ ದಿನೇ ಹೆಚ್ಚುತ್ತ ನಿಲ್ಲದೆ ಸಾಗಿವೆ ರೈಲುಗಳು.
ಆ ವೇಗಕೆ ಓಡಿದನು, ಬಿಟ್ಟೋಡಿದನು ಹಳಿಯನು
ಹೇಳದೆ ಕೇಳದೆ ಯಾರಿಗೂ ಕಾಣದ ಜಾಗಕೆ.

– **ಶ್ರೀವತ್ಸ ಹಂಪಾಪುರ**



**MAY** — ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ. — **2024**

| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 | 26 | 27 | 28 | 29 | 30 | 31 | | | | | | | | |



Suresh Angadi
Ex. Rly Minister



H. K. Srivatsa
Writer

*Please join your hands with us for a smooth, Safety and comfortable journey .*


Copyright:3i Solutions-Mysuru, Karnataka, India, Ph:- 9242875447, email:3iSolution59@gmail.com

## ಸ್ಟೇಷನ್ ಮಾಸ್ಟರ್




ಸ್ಟೇಷನ್ ಮಾಸ್ಟರ್, ಸ್ಟೇಷನ್ ಮಾಸ್ಟರ್, ಬಿಳಿಸೂಟಲಿ ಪಳ-ಪಳ ಹೊಳೆಯುವ ಮಿಂಚುವ ಮಾಸ್ಟರ್
ಓಡುವ ರೈಲುಗಳ ಕಂಟ್ರೋಲ್ ಮಾಸ್ಟರ್, ಕುಳಿತಲ್ಲೇ ಗುಂಡಿಗಳ ತಿರುವವ ಮಾಸ್ಟರ್
ಹಳದಿಯಲಿ ಎಚ್ಚರಿಸಿ, ಕೆಂಪಲಿ ನಿಲ್ಲಿಸಿ, ಹಸಿರಲಿ ಓಡಿಸಿ, ಬಣ್ಣಗಳ ದೀಪದಲಿ ರೈಲನು ಆಡಿಸಿ-ಹಾಡುವ ಮಾಸ್ತರ್.

ಇರುವುದು ಇವನ ಕೈಯಲ್ಲೇ ಪಯಣಿಸುವ ಜನಗಳ ಜೀವಾಳ
ಒಂದು ನಿಮಿಷ ಅಜಾಗ್ರತನಾದರೆ ಬಂತು ಪಯಣಿಸುವ ಜನಗಳಿಗೆ ಗ್ರಹಚಾರ.

ಹೆಚ್ಚಿನ ಬಂಡಿಯು ಸಾಗುತ್ತಿದ್ದರೆ ಬ್ಯುಸಿ, ಬ್ಯುಸಿ, ಎನ್ನುತ ಜನಗಳ ಜೊತೆಯಲ್ಲಿ ಚುರುಕಾಗಿರುವನು
ರಾತ್ರಿಯಲೊಬ್ಬನೆ ನಿದ್ರಿಸಿ, ನಿದ್ರಿಸಿ, ಕುರ್ಚಿಯಿಂದಲೇ ದೂಗಿ-ದೂಗಿ ಬೀಳುವನು.

ಪ್ರಯಾಣಿಕರು ಬಂಡಿಯ ಬಗ್ಗೆ ಮಾಹಿತಿ ಕೇಳಲು ಹೋದರೆ ಕ್ರಾಸಿಂಗ್, ಕ್ರಾಸಿಂಗ್ ಎನ್ನುವನು
ಆಡುವನು, ಜಗಳವಾಡುವನು ದಿನವೂ ಗೇಟ್‌ಮ್ಯಾನ್‌ಗಳ ಜೊತೆಯಲ್ಲಿ
ಬೀಗುವನಿವನು, ರೈಲು ಇಲಾಖೆಗೆ ನಾನೇ ಹೆಚ್ಚೆನ್ನುವನು.

ನಮ್ಮ ಸ್ಕೂಲಿನ ಮಾಸ್ಟರು ಗಣಿತವ ಮಾಡಿ ನಮ್ಮಗಳ ಬುದ್ಧಿ ಚುರುಕಾಗಿಸುವರು
ಸ್ಟೇಷನ್ ಮಾಸ್ಟರ್ ಗಾಡಿಗಳ ನಿಲ್ಲಿಸಿ, ಓಡಿಸಿ ಪಯಣಿಪ ಜನಗಳ ಅಂತಿಂದಿತ್ತ ಕಳುಹಿಸುವನು.

ರೈಲು ಇಲಾಖೆಗೆ ನಾನೇ ದೊಡ್ಡವ, ನಾನಿಲ್ಲದೆ ರೈಲು ಬಂಡಿ ಓಡದು ಎಂಬ ಹೆಮ್ಮೆಯು ಅವನಲ್ಲಿ,
ನಾ ಹೆಚ್ಚು-ಕಮ್ಮಿ ಎನ್ನದೆ ಎಲ್ಲರೂ ಜೊತೆಯಲಿ ಕೈ ಜೋಡಿಸಿದರೆ,
ತಾನೆ ಓಡುತಾ ಸಾಗುವುದು ಬಂಡಿಯು ಮುಂದಕೆ ಜೊತೆಯಲ್ಲಿ

- **ಶ್ರೀವತ್ಸ ಹಂಪಾಪುರ**

**JUNE** **2024**


ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.


| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | | | | | | |



Sadananda Gowda
Ex. Rly Minister



H. K. Srivatsa
Writer

*Please join your hands with us for a smooth, Safety and comfortable journey .*

# 3I SOLUTIONS

## PUBLIC & TRACK MAINTAINERS SAFETY AWARENESS-2024

**ಜುಲೈ 2024**

# ರೈಲು ಹಳಿಯ ರಕ್ಷಣಾ ಪಟಾಕಿ

ಸ್ಕೂಲಲ್ಲಿ ಮಾಸ್ತರ್ ಹೇಳಿದರಿಷ್ಟೇ

ರೈಲು ಹಳಿ ಬಿರುಕು ಬಿಟ್ಟಾಗ
ಶರವೇಗದಲಿ ರಕ್ಷಣೆ ಮಾಡಿ
ಬಂಡಿಯ ಕಳೆಸೆನ್ನುವರು

ಸ್ಕೂಲಿನ ಮಾಸ್ತರು ಹೇಳಿದರು
ಎರಡು ಬದಿ 30 ಮೀಟರ್ ಅಂತರದಲ್ಲಿ
ಕೆಂಪು ಕೈ ಬಾವುಟವನ್ನು ನೆಡು ರಾಮಣ್ಣ ಎನ್ನಿಹರು


ಬಂಡಿ ಬರುವ ದಿಕ್ಕಿಗೆ ಕೈಯಲ್ಲಿ
ಪಟಾಕಿ-ಬಾವುಟವ ಹಿಡಿದು ಓಡೆನ್ನುವರು
ಕಟ್ಟು ಒಂದು ಪಟಾಕಿಯನ್ನು 600 ಮೀಟರ್‌ನಲಿ
ಮತ್ತೆ ಮೂರನ್ನ 1200 ಮೀಟರ್‌ನಲಿ
10 ಮೀಟರ್ ಅಂತರದಲ್ಲಿ ಕಟ್ಟೆನ್ನುವರು.



ಹಳಿಯ ಎರಡು ಕಡೆ ರಕ್ಷಣೆ ಮಾಡಿ
ಜಾಗಲ್ ಪಟ್ಟಿಯನ್ನು ಬಿರುಕಿಗೆ ಕಟ್ಟಿ
ಬಂಡಿಯನು ಸುರಕ್ಷತೆಯಲಿ ಕಳುಹಿಸೆನ್ನುವರು.

ಮರೆಯದಿರು ಡಬ್ಬಿಯಲ್ಲಿರುವುದು ಹತ್ತೇ ಪಟಾಕಿ
ಇದಕ್ಕೂ ಇರುವುದು 5 ವರ್ಷ ಆಯಸ್ಸೆನ್ನುವರು
ನಿನಗೆ ಕೊಡಲಿ ದೇವರು ನೀ ಮಾಡಿದ ಕೆಲಸಕೆ
ನೂರು ವರುಷ ಧೀರ್ಘಾಯಸ್ಸು ಎನ್ನುವರು.

- **ಶ್ರೀವತ್ಸ ಹಂಪಾಪುರ**




## JULY 2024

ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.



| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 | 28 | 29 | 30 | 31 | | | | | | | | | | |



H. K. Srivatsa
Writer

*Please join your hands with us for a smooth, Safety and comfortable journey .*

Copyright:3i Solutions-Mysuru, Karnataka, India, Ph:- 9242875447, email:3iSolution59@gmail.com

DEVELOPERS OF INNOVATIVE TEACHING & TRAINING AID SAFETY MATERIALS

ಆಗಸ್ಟ್
2024

## ದೇಶ ಸೇವೆ-ಈಶ ಸೇವೆ

ಬದುಕ ಬೇಕು, ಬದುಕಬೇಕು, ಭಾರತ ದೇಶದ ಸೇವೆಗೆ ಬದುಕಬೇಕು
ದುಡಿಯಬೇಕು, ದುಡಿಯಬೇಕು ರೈಲು ಇಲಾಖೆಗೆ ದುಡಿಯಬೇಕು.

ದೇಶಕೆ ದುಡಿದ ಸಿಪಾಯಿಗಳು ಟ್ರಾಕ್ ಮ್ಯಾನ್ ಕೆಲಸವ ಕಷ್ಟವೆಂದು ಬಿಟ್ಟೋಡಿದರು
ದೇಶ ಸೇವೆಯೇ ಈಶ ಸೇವೆ ಎಂದು ನಂಬಿದ ಹುಡುಗರು ಮಾತ್ರ ಇಲ್ಲಿಹರು,

"ಕೈ ಕೆಸರಾಗದೆ ಬಾಯ್‌ಗೆ ಮೊಸರೆನ್ನುವ" ತತ್ವ ನಂಬದ
ಜಂಬದ ಹುಡುಗರು ಕೆಲಸವ ಬಿಟ್ಟೋಡಿದರು.
ತಿರುಗಿ ವಾಪಸ್ ಬರಲು ಹೇಗೆಂದು ಸಮಯವ ಕಾಯುತ ಕುಳಿತಿಹರು

ಹೌದು ಒಪ್ಪುವೆ ಈ ಕೆಲಸಕ್ಕೆ ಬೇಕು ದೈಹಿಕ ಶಕ್ತಿಯು
ಮಾನಸಿಕ ದೃಢತೆಯು, ವಿದ್ಯೆ ಬಲವು-ಚಾಣಕ್ಷ ನಡೆಯು.
ಬನ್ನಿರಿ ಎಲ್ಲರೂ ಒಗ್ಗಾಟ್ಟಾಗಿ, ಜೋಡಿಸಿ ಕೈಯನ್ನು ಸಾಗುವ ರೈಲಿಗೆ ಮುಂದಾಗಿ.

ನಾವು ಹಳಿಯಲಿ ದುಡಿದರೆ ತಾನೇ ಸಾಗುವುದು ಬಂಡಿ,
ನಾವು ಸೋತು ನಿಂತರೇ ನಿಲ್ಲುವುದು ಬಂಡಿ.

ನಮ್ಮಯ ಪರಿಶ್ರಮ ಕೆಲಸಕ್ಕೆ ಆ ದೇವನು ಕೊಡುವನು ಅನ್ನವನು
ಬನ್ನಿರಿ ಎಲ್ಲರೂ ಮೇಲು ಕೀಳೆನ್ನದೆ ರೈಲಿನ ರಥವ ಎಳೆಯೋಣ,
ಭಾರತ ಮಾತೇಯ ಹೆಮ್ಮೆಯ ರೈಲು ಸಿಪಾಯಿಗಳಾಗೋಣ.

- **ಶ್ರೀವತ್ಸ ಹಂಪಾಪುರ**



Courtesy: Adarsh Somankutty



## AUGUST 2024


ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.




| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | 31 | | | | | | | |



H. K. Srivatsa
Writer

*Please join your hands with us for a smooth, Safety and comfortable journey .*


Copyright:3i Solutions-Mysuru, Karnataka, India, Ph:- 9242875447, email:3iSolution59@gmail.com

# 3I SOLUTIONS

**PUBLIC & TRACK MAINTAINERS SAFETY AWARENESS-2024**

**ಸೆಪ್ಟೆಂಬರ್ 2024**

## ಮಕ್ಕಳ ರೈಲು

ಬಂತು ಬಂತು ಬಣ್ಣದ ರೈಲು
ತಂತು ಮನಕೆ ಹರುಷವ ರೈಲು
ಅಜ್ಜನು ಹೇಳಿದ ಕನಸಿನ ರೈಲು
ಅಮ್ಮನು ಹೇಳಿದ ಕಥೆಗಳ ರೈಲು.

ನಿನ್ನಯ ಉದ್ದಕ್ಕೂ ಚಕ್ರಗಳ ಸಾಲು
ಚಕ್ರಗಳ ಕೆಳಗೆ ಹಳಿಗಳ ಸಾಲು
ಸಾವಿರ ಪದಿಯಂತೆ ಸಾಗುವ ರೈಲು
ಎಲ್ಲರ ಊರಿಗೂ ತಲುಪುವ ರೈಲು.

ಅಜ್ಜ-ಅಜ್ಜಿಯ ಯಾತ್ರೆಯ ರೈಲು
ಅಪ್ಪನು ಪಯಣಿಸುವ ನಿತ್ಯದ ರೈಲು
ತಮ್ಮನು ಆಟದಿ ಆಡುವ ರೈಲು
ಅಕ್ಕ ಅಣ್ಣನ ಶಾಲೆಗೆ ಕರೆದೊಯ್ಯುವ ರೈಲು.


ನಮ್ಮಯ ಮಾಸ್ತರರು ಬರುವ ರೈಲು
ಶಾಲೆಯ ವೇಳೆಯ ತಿಳಿಸುವ ರೈಲು
ಗಂಟೆಯ ಬಾರಿಸಲು ಬೇಕು ನಿನ್ನಯ ಕಂಬಿ
ಮಕ್ಕಳು ನಿಲ್ಲುವರು ಸಾಲನು ತುಂಬಿ

ನಿಂತಿದೆ ಮಕ್ಕಳ ಸಾಲು - ಪ್ರಾರ್ಥಿಸಲು
ಹೊರಟಿದೆ ಬೋಗಿಗಳ ಸಾಲು - ಪಯಣಿಸಲು

ನಿನ್ನಯ ಜಪದಲಿ ಓದುವ ನಾವು,
ನಿನ್ನಯ ಶಿಸ್ತನು ಪಾಲಿಸುವೆವು.
ಬರುತಿರು ನೀನು, ಕಲಿವೆವು ನಾವು,
ಎಂದಿಗೂ ನಿನ್ನನು ಮರೆವೆವು.

ಎಂದಿಗೆ ನಿನ್ನನು ಮರೆತೆವೋ ನಾವು
ಅಂದೇ, ನಾಡಿಗೂ-ನಮಗೂ ಆಪತ್ತು.
ನಮಗಿರಬೇಕು ನಾಳಿನ ಚಿಂತೆಯು,
ನಾವೇ ನಾಡಿನ ಸಂಪತ್ತು.

ಶಿಸ್ತನು ಪಾಲಿಸಿ, ಶ್ರಮದಲಿ ದುಡಿದು
ಸತ್ಯವ ಪಾಲಿಸಿ, ಭ್ರಷ್ಟತೆಯನು ತೊಡೆದು,
ನಿನ್ನಯ ಸೇವೆಯ ಮಾಡುವ ನಾವು,
ದೇಶದ ಮುಂದಿನ ಸತ್ಪ್ರಜೆಗಳಾಗುವೆವು.




Courtesy: Internet

\- **ಶ್ರೀವತ್ಸ ಹಂಪಾಪುರ**

## SEPTEMBER 2024

ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.



| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 | 29 | 30 | | | | | | | | | | | | |



H. K. Srivatsa
Writer

*Please join your hands with us for a smooth, Safety and comfortable journey .*

**Copyright:3i Solutions-Mysuru, Karnataka, India, Ph:- 9242875447, email:3iSolution59@gmail.com**

**DEVELOPERS OF INNOVATIVE TEACHING & TRAINING AID SAFETY MATERIALS**

# 3I SOLUTIONS

## PUBLIC & TRACK MAINTAINERS SAFETY AWARENESS-2024

ಆಕ್ಟೋಬರ್
2024

## ಎಷ್ಟೋ- ಎಷ್ಟೋ

ರೈಲು ನಿಲ್ದಾಣಗಳೆಷ್ಟೋ, ನಿಲ್ಲುವ ರೈಲಿಗೆ ಹತ್ತುವರೆಷ್ಟೋ
ಕೂರುವ ಜಾಗವಿದ್ದರು ನಿಲ್ಲುವರೆಷ್ಟೋ, ನಿಲ್ಲುವ ಜನಗಳ ನೋಡುವರೆಷ್ಟೋ
ಮೌನದಿ ಕೂರುವರೆಷ್ಟೋ, ನಗಿಸುವರೆಷ್ಟೋ
ನಲಿಯುವರೆಷ್ಟೋ, ಬಾಗಿಲ ಬಳಿ ನಿಲ್ಲುವರೆಷ್ಟೋ
ದಿನವು ಪಯಣಿಸುವ ಜನರೆಷ್ಟೋ, ಓಡುವ ರೈಲನ್ನು ನೋಡುವರೆಷ್ಟೋ.

ಪ್ರೇಮಿಸುವರೆಷ್ಟೂ, ಪ್ರೀತಿಯ ಹುಡುಕುತ ಕಾಯುವರೆಷ್ಟೋ
ಕಣ್ಣು-ಕಣ್ಣುಗಳ ಮಿಲನಗಳೆಷ್ಟೋ, ಮೌನದಿ ಪ್ರೀತಿಗಳ ಕರೆಯುವರೆಷ್ಟೋ.
ಹಾಡುವರೆಷ್ಟೋ, ಕುಣಿಯುವರೆಷ್ಟೋ, ಪ್ರೀತಿಸುವ ಹೃದಯಗಳೆಷ್ಟೋ
ಹುಡುಗ-ಹುಡುಗಿಯರ ಮಾತುಗಳೆಷ್ಟೋ
ಅಜ್ಜ-ಅಜ್ಜಿಯರ ಸಂಕಟಗಳೆಷ್ಟೋ, ಗಂಡ-ಹೆಂಡತಿಯರ ಕಿರುನಗೆ ಎಷ್ಟೋ,
ಕಣ್ಣನ್ನು ಮಿಟುಕುವರೆಷ್ಟೋ, ಮೈಯನ್ನು ತಾಕಿಸುವ ಮೈಗಳ್ಳರೆಷ್ಟೋ.

ಕಿಟಕಿಯಲಿ ಕಾಣುವ ಪ್ರಕೃತಿಯ ಸೊಬಗನು ನೋಡುವರೆಷ್ಟೋ
ಅದೇ ಕಿಟಕಿಗೆ ಕಲ್ಲೆಸುವವರೆಷ್ಟೋ.
ಅಳುವವರೆಷ್ಟೋ, ನಗಿಸುವರೆಷ್ಟೋ, ತೂಗುವರೆಷ್ಟೋ, ತುಳಿಯುವರೆಷ್ಟೋ
ಜಗಿಯುವರೆಷ್ಟೋ, ಜಗಿಯುವರೆಷ್ಟೋ.

ಟಾಟಗಳೆಷ್ಟೋ, ತಾಳಗಳಷ್ಟೋ, ಜಿರಳೆಗಳೆಷ್ಟೋ, ಜಿಗಣೆಗಳೆಷ್ಟೋ, ಇಲಿಗಳೆಷ್ಟೋ
ಜಗಳಗಳೆಷ್ಟೋ, ಹಗಲಿರುಳೆಷ್ಟೋ, ಕೊನೆಗೆಲ್ಲರು ಸೇರುವ ಜಾಗಗಳೆಷ್ಟೋ
ಈ ಎಷ್ಟೋ ಎಷ್ಟೋ ನಾನರಿಯೇ - ನೀನರಿಯೇ
ನಿನ್ನಯ ಸೇವೆಯ ಎಂದಿಗೆ ಅರಿವರು ಅಂದೇ ನಿನಗೆ ಧನ್ಯತೆಯು.

- **ಶ್ರೀವತ್ಸ ಹಂಪಾಪುರ**




**ಸರ್ ಎಂ. ವಿಶ್ವೇಶ್ವರಯ್ಯ ರೈಲು ನಿಲ್ದಾಣ, ಬೈಯಪ್ಪನಹಳ್ಳಿ**
ಭಾರತದ ಮೊದಲ ಹವಾ ನಿಯಂತ್ರಿತ ರೈಲು ನಿಲ್ದಾಣ.



Courtesy: Internet

ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.

## OCTOBER 2024



| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 | 27 | 28 | 29 | 30 | 31 | | | | | | | | | |



H. K. Srivatsa
Writer

*Please join your hands with us for a smooth, Safety and comfortable journey .*

Copyright:3i Solutions-Mysuru, Karnataka, India, Ph:- 9242875447, email:3iSolution59@gmail.com


DEVELOPERS OF INNOVATIVE TEACHING & TRAINING AID SAFETY MATERIALS

ನವೆಂಬರ್ 2024

## ಅಕ್ಷರ - ಅಕ್ಷಯ ಯೋಜನೆ

ಕಲಿಯುತ್ತಾ ಕಲಿಸು, ಕಲಿಸುತ್ತಾ ಕಲಿ
ರೈಲು ಸುರಕ್ಷತಾ ಕಾನೂನನು.
ರೈಲು ಹಳಿ ತರಬೇತಿ ಕೇಂದ್ರದಲ್ಲಿ ತಿಳಿಸಿದರು
ಹಳಿಯ ರಕ್ಷಣೆ ಮಾಡುವ ವಿಧಾನವನು.
ಕಲಿಸಿದವು ಭಿತ್ತಿ ಚಿತ್ರ, ಕೈಪಿಡಿ ಪುಸ್ತಕ, ದೃಶ್ಯ ಮಾಧ್ಯಮಗಳು
ಕೆಲಸದ ಜಾಗದ ರಕ್ಷಣೆಯನ್ನು, ನಮ್ಮಗಳ ಹಳಿಗಳ ಕರ್ತವ್ಯಗಳನು.

ಅರಿತೆವು ನಾವು ನಮ್ಮಯ ಜವಾಬ್ದಾರಿಗಳನ್ನು ತರಬೇತಿ ಕೇಂದ್ರದಲಿ
ಬೇಕೆ ಬೇಕು ಟ್ರಾಕ್ ಮ್ಯಾನ್ ಕೆಲಸಕೆ ಬೇಕು ವಿದ್ಯೆಯು
ತಿಳಿ ಹೇಳಿದರು ಟ್ರಾಕ್ ಮ್ಯಾನ್‌ಗಳ ಸ್ವಂತ ಸುರಕ್ಷತೆಯನು ಅಲ್ಲಿ
ಮತ್ತೆ ಹೋಗುವೆವು ಐದು ವರ್ಷಗಳ ನಂತರ ತರಬೇತಿ ಕೇಂದ್ರಕೆ
ಆದರೆ ಎಲ್ಲವ ಮರೆಯುವೆವು ಈ ಐದು ವರ್ಷಗಳ ಅವಧಿಯೊಳಗೆ.



ಕೊಟ್ಟಿದ್ದಾರೆ ಕೈಪಿಡಿ ಪುಸ್ತಕಗಳನ್ನು ಓದಲು ಫೀಲ್ಡಿನಲಿ
ಹೇಳಿದ್ದಾರೆ ಆಗಿಂದ್ದಾಗೆ ಮನನವ ಮಾಡಿ ರೈಲು ಹಳಿ ರಕ್ಷಣೆಗೆಂದು
ಫೀಲ್ಡ್ ತರಬೇತಿ ಕಿಟ್ಟಿಂದ ಎಲ್ಲರೂ ಒಟ್ಟಿಗೆ ಕೂಡಿ ಕಲಿಯಿರಿ ಎಂದು
ಡಾ. ಅಬ್ದುಲ್ ಕಲಾಂ ಹೇಳಿರುವಂತೆ "ಕಲಿಯುತ್ತಾ ಕಲಿಸು ಕಲಿಸುತ್ತಾ ಕಲಿಯಿರಿ"
ಎಲ್ಲರೂ ಸುರಕ್ಷತಾ ಕಾನೂನನು.

ಮತ್ತೆ ಬನ್ನಿರಿ ಐದು ವರ್ಷಗಳ ನಂತರ ಕಲಿಸುತ್ತೇವೆ
ಹೊಸ-ಹೊಸ ವಿಷಯಗಳನ್ನು, ಹೊಸದಾಗಿ ತಂದಿರುವ ಕಾನೂನುಗಳನು.
ತನ್ನಿರಿ ಹೊಸ ಹೊಸ ಬದಲಾವಣೆಗಳನ್ನು ನೀವು ಮಾಡುವ ಕೆಲಸದಲಿ
ಕೊಡುವರು ಜನರು ಗೌರವವ ನಿಮ್ಮೀ ಸೇವೆಯ ನೋಡಿ.
ರೈಲು ಹಳಿ ರಕ್ಷಣೆಯನ್ನು ಮಾಡಿ
ದೇಶಕೆ-ನಾಡಿಗೆ ಸತ್ಪ್ರಜೆಗಳಾಗಿ ಎಂದು, ಎಂದೆಂದೂ.

- **ಶ್ರೀವತ್ಸ ಹಂಪಾಪುರ**




ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.

**NOVEMBER 2024**

| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | | | | | | | |



Vandhe Bharath



H. K. Srivatsa
Writer

*Please join your hands with us for a smooth, Safety and comfortable journey .*

Copyright:3i Solutions-Mysuru, Karnataka, India, Ph:- 9242875447, email:3iSolution59@gmail.com

# 3I SOLUTIONS

## PUBLIC & TRACK MAINTAINERS SAFETY AWARENESS-2024

ಡಿಸೆಂಬರ್
2024

## ಸ್ವಚ್ಛತಾ ಆಂದೋಲನ

ದೇಶ ಸೇವೆಗೆ ಯಾವುದೇ ಕೆಲಸವಾದರೂ ಮಾಡೋಣ
ಈಶ ಸೇವೆ ಎಂದು ಭಾವಿಸಿ ನಾವೆಲ್ಲರು ದುಡಿಯೋಣ.


ವಿದ್ಯೆಯ ಕೊಟ್ಟ, ಬೆಳಗಿದ ಮನವ, ದೇವನೆಂಬ ತಂದೆ,
ಎಲ್ಲಾ ಕೆಲಸವು ಒಂದೇ, ಕುಡಿವ ನೀರು-ತಿನ್ನುವ ಅನ್ನವು ಒಂದೇ
ಕೆಲಸವ ಕೀಳು, ಮೇಲೆನ್ನದೆ ಎಲ್ಲರೂ ಸೇರಿ ಮಾಡೋಣ.

ನಮ್ಮಯ ಸ್ವಾರ್ಥವ ನೋಡುತಲಿಹರು, ನಮ್ಮೀ ಮಕ್ಕಳು
ಸೋಕದಿರಲಿ ಜಾತಿ, ಧರ್ಮಗಳ ವಿಷ - ಆ ಮಕ್ಕಳ ತಿಳಿ ಮನಸುಗಳ.
ಎಲ್ಲರೊಂದೇ ಎಂಬ ಮಾನವ ಧರ್ಮವ ಮಕ್ಕಳಲಿ ಬೆಸೆಯೋಣ
ದೇಶದ ಸ್ವಾತಂತ್ರ್ಯದ ಚರಿತೆಯನು ಅವರಲಿ ತುಂಬೋಣ.

ಹುಟ್ಟುವುದೊಂದೆ ಬಾರಿ, ಸಾವು ಶಾಶ್ವತವಲ್ಲವೇ
ದೇಶಕ್ಕೆ ದುಡಿಯುವುದು ನಮ್ಮಯ ಕರ್ತವ್ಯವಲ್ಲವೇ.
ಮಕ್ಕಳಿಗೆಲ್ಲ ದಾರಿದೀಪವ ತೋರೋಣ,
ನಾಳಿನ ಮಕ್ಕಳ ಏಳಿಗೆಗೆ ಇಂದೇ ಬನ್ನಿರಿ ದುಡಿಯೋಣ.

ಒಂದೇ ನಾಡು, ಒಂದೇ ಕುಲವು
ಒಂದೇ ಜಲವು, ಒಂದೇ ದೈವವು
ಎನ್ನುತ ಮಕ್ಕಳ ಬೆಳೆಸಿ ನಾವು ಬಾಳೋಣ.
ಸ್ವಚ್ಛತಾ ಸ್ಫೂರ್ತಿಯ ಎಲ್ಲರ ಮನದಲಿ ತುಂಬೋಣ.

- **ಶ್ರೀವತ್ಸ ಹಂಪಾಪುರ**



ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.

**DECEMBER 2024**

| S | M | T | W | T | F | S | S | M | T | W | T | F | S | S | M | T | W | T | F | S |
|---|---|---|---|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 | 29 | 30 | 31 | | | | | | | | | | | |



Amruth Bharath



H. K. Srivatsa
Writer

*Please join your hands with us for a smooth, Safety and comfortable journey .*

Copyright:3i Solutions-Mysuru, Karnataka, India, Ph:- 9242875447, email:3iSolution59@gmail.com

DEVELOPERS OF INNOVATIVE TEACHING & TRAINING AID SAFETY MATERIALS

## ಕೃತಜ್ಞತೆಗಳು

### (ನಿವೃತಿ ನಮಗಲ್ಲ-ಇಲಾಖೆಯ ಲೆಕ್ಕಕ್ಕೆ)

ಇರಲಿ ನಮ್ಮ ನಿಮ್ಮೆಲ್ಲರ ಒಲವು ನಿವೃತ್ತಿಯ ನಂತರವು
ಮರೆಯಬಾರದು ಅಷ್ಟು ಸುಲಭವಾಗಿ ನಮ್ಮಗಳ ಸ್ನೇಹವನು,
ಬಾರದು ಕಾಲ ಮತ್ತೇ ಆಯಿತು ಆಯಸ್ಸು ನಿವೃತ್ತಿಗೆ ಮಾತ್ರ
ಇಲಾಖೆಯ ಲೆಕ್ಕಕ್ಕೆ ಸೇರಿತು ನನ್ನ ಅರವತ್ತು
ನಮ್ಮ-ನಿಮ್ಮಗಳ ಪ್ರೀತಿ-ವಾತ್ಸಲ್ಯಕ್ಕಲ್ಲ
ಇರಲಿ ನಮ್ಮ ನಿಮ್ಮೆಲ್ಲರ ಪ್ರೀತಿ ನಿವೃತ್ತಿ ನಂತರವು............

ಕಳೆದು ಹೋಯಿತು 60 ವರ್ಷದ ಆಯುಷ್ಯ ಬದುಕಿನ ಯಾತ್ರೆಯಲಿ
ಅದನು ಮತ್ತೇ ಪಡೆಯೋಣ ನಮ್ಮ-ನಿಮ್ಮೆಲ್ಲರ ಪ್ರೀತಿಯ ಹರ್ಷದಲಿ
ಅದರಿಂದ ಮತ್ತೇ ಮತ್ತೇ ಹೆಚ್ಚುವುದು ನೂರರ ಆಯಸ್ಸು ಬಾಳಲಿಕ್ಕೆ ಜೊತೆಯಲಿ.
ಇರಲಿ ನಮ್ಮ ನಿಮ್ಮೆಲ್ಲರ ಪ್ರೀತಿ ನಿವೃತ್ತಿ ನಂತರವು............

ನೆನಪಿಸುವುದು ಬೇಡ ಸಕ್ಕರೆ, ರಕ್ತದೊತ್ತಡದ ಖಾಯಿಲೆಗಳನು
ನಮಗಲ್ಲದೆ ನೋವು-ನಲಿವುಗಳು ಮರಗಳಿಗೇ ಬರುವುದೇ?
ನಗು ನಗುತಾ ಸ್ವೀಕರಿಸುವ ಅವುಗಳನು, ನಮ್ಮ ದೈನಂದಿನ ಪಯಣದಲಿ
ಬರಲಿ, ಇರಲಿ, ಹೊಡೆದೋಡುವ ಅವುಗಳನು ನಮ್ಮ-ನಿಮ್ಮ ಸ್ನೇಹದಲಿ
ನಗು ಮೊಗದಲಿ, ಶಾಂತ ಚಿತ್ತದಿಂದಲಿ
ಇರಲಿ ನಮ್ಮ ನಿಮ್ಮೆಲ್ಲರ ಪ್ರೀತಿ ನಿವೃತ್ತಿ ನಂತರವು............

ಆಡುವ ಆಟಗಳನು ಮಕ್ಕಳ-ಮೊಮ್ಮಕ್ಕಳ ಜೊತೆಯಲಿ
ನಡೆಯಿರಿ ನಲಿಯುತ ಉದ್ಯಾನವನದ ಸುತ್ತ ಸ್ನೇಹಿತರ ಜೊತೆಯಲಿ
ತಟ್ಟಿರಿ ಚಪ್ಪಾಳೆಯನು ಬೇರೊಬ್ಬರ ಬಾಳಿನ ಬೆಳಕಿನ ದೀಪದಲಿ
ಆಗಲೇ ಬರುವುದು ಹರುಷವು ನಮ್ಮಗಳ ಬಾಳಿನ ಬದುಕಿನಲಿ
ಇರಲಿ ನಮ್ಮ ನಿಮ್ಮೆಲ್ಲರ ಪ್ರೀತಿ ನಿವೃತ್ತಿ ನಂತರವು............

ಕೈಲಾದರೆ ಮಾಡಿರಿ ಸಹಾಯವನು ಟ್ರ್ಯಾಕ್‌ಮ್ಯಾನ್‌ಗಳ ಸೇವೆಯಲಿ
ಅವನು ಹಗಲಿರುಳು ದುಡಿಯುತಿಹನು ಭಾರತೀಯ ರೈಲು ಇಲಾಖೆಯಲಿ
ಹಳಿಯ ಸುರಕ್ಷತೆಯಲಿ ತನ್ನ ಜೀವವ ಲೆಕ್ಕಿಸದೆ
ರಕ್ಷಿಸಿ ಅವರುಗಳ ಜೀವವ ಎಚ್ಚರಿಕೆಯ ಗಂಟೆಯಲಿ
ಗೌರವಿಸಿ ಅವರುಗಳ ಸೇವೆಯನು ಯೋಧರ ಜೊತೆಯಲಿ
ಇರಲಿ ನಮ್ಮ ನಿಮ್ಮೆಲ್ಲರ ಪ್ರೀತಿ ನಿವೃತ್ತಿ ನಂತರವು............

"ಶ್ರೀವತ್ಸ ಹಂಪಾಪುರ"

**ಜ**

| S | M | T | W | T | F | S |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

**ಫೆ**

| S | M | T | W | T | F | S |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | |

**ಮಾ**

| S | M | T | W | T | F | S |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

**ಏ**

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

**ಮೇ**

| S | M | T | W | T | F | S |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

**ಜೂ**

| S | M | T | W | T | F | S |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |




ರೇಖಾ ಚಿತ್ರಗಳು ಹಾಗೂ ಪದ್ಯಗಳು ಕಾಪಿರೈಟ್ ಹಕ್ಕಿಗೆ ಒಳಪಟ್ಟಿರುತ್ತವೆ.





Copyright:3i Solutions-Mysuru, Karnataka, India, Ph:- 9242875447, email:3iSolution59@gmail.com

DEVELOPERS OF INNOVATIVE TEACHING & TRAINING AID SAFETY MATERIALS